# 32. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಂಕರಘಟ್ಟ

ಸ.ಹಿ.ಪ್ರಾ. ಶಾಲೆ ಶಂಕರಘಟ್ಟಗೆ ನಾವು ಬಂದಾಗ, ಶಾಲೆಯಲ್ಲಿ ಒಂದು ಕುರ್ಚಿ, ಒಂದು ಟೇಬಲ್ ಮತ್ತು ತರಗತಿಯಲ್ಲಿ ಬೆಂಚು ಮತ್ತು ಮಣೆಗಳು ಟೇಬಲ್ ಇಷ್ಟು ಸೌಲಭ್ಯಗಳಿದ್ದವು. ಕಲಿಕೆಯು ಕೂಡ ಉತ್ತಮವಾಗಿರಲಿಲ್ಲ. ಸಮುದಾಯದೊಂದಿಗೆ ಮತ್ತು ಗ್ರಾಮದ ಜನತೆ ಜೊತೆಗೆ ಬೆರೆತು ಅವರಿಗೆ ನಮ್ಮ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು ಸ್ವಲ್ಪ ಕಷ್ಟವಾಯಿತು. ನಮ್ಮ ಕೆಲಸ ಶಾಲೆಗೆ ಹೋಗುವುದು ಪಾಠಮಾಡುವುದು ಬರುವುದು ಅಷ್ಟೇ ಆಗಿತ್ತು. ಈ ಬಗ್ಗೆ ಎಸ್‌ಡಿಎಂಸಿಯವರು ಮತ್ತು ಶಿಕ್ಷಕರು ಕುಳಿತು ಚರ್ಚಿಸಿ ದಾನಿಗಳು ಮತ್ತು ಇತರೆ ಮೂಲಗಳಿಂದ ಅನುದಾನ ಪಡೆದು ಶಾಲೆಯನ್ನು ಉತ್ತಮ ಪಡಿಸಲು ತೀರ್ಮಾನಿಸಿದೆವು.

"ಪೋಷಕರ ಮತ್ತು ಶಿಕ್ಷಕ ಸಂವಾದ" ಆಯ್ಕೆ ಮಾಡಿದ್ದು ಪೋಷಕರನ್ನು ಶಾಲೆಗೆ ಬರುವಂತೆ ಮಾಡಲು ತುಂಬಾ ಶ್ರಮ ಪಡಬೇಕಾಯಿತು. ಆದರೆ ಪೋಷಕರ ಮನ ಒಲಿಸಲು ಮಕ್ಕಳ ಮೂಲಕವೇ ನಾವು ಅವರು ಶಾಲೆಗೆ ಬರುವಂತೆ ಮಾಡಲಾಯಿತು. ಪೋಷಕರ ಪಾತ್ರದ ಬಗ್ಗೆ ಅರಿವು ಮೂಡಿಸಲಾಯಿತು. ದಾನಿಗಳಿಗೆ ಶಾಲೆ ಸಮಸ್ಯೆಯ ಬಗ್ಗೆ ಅರಿವು ಮೂಡಿಸುವುದು ಮತ್ತು ಶಾಲೆಗೆ ಬೇಕಾಗುವ ಭೌತಿಕ ಅವಶ್ಯಕತೆಗಳ ಬಗ್ಗೆ ತಿಳುವಳಿಕೆ ಮೂಡಿಸುವುದು ಕಷ್ಟವಾಗಿತ್ತು.

## ನಾವಿನ್ಯತೆ ಮಾಡಿದ ಬಗ್ಗೆ

- 2006–07ನೇ ಸಾಲಿನಲ್ಲಿ ರೋಟರಿ ಕ್ಲಬ್ ಶಿವಮೊಗ್ಗ ನಾರ್ಥ್ ಇವರಿಂದ ಐದು ಕಬ್ಬಿಣದ ಡೆಸ್ಕುಗಳು, ಗ್ರಾಮ ಪಂಚಾಯ್ತಿಂದ 6 ಪ್ಲಾಸ್ಟಿಕ್ ಕುರ್ಚಿಗಳು, 2011–12ರಲ್ಲಿ ಎಸ್.ಬಿ.ಐ ಬ್ಯಾಂಕ್ ಮತ್ತು ದಾನಿಗಳ ನೆರವಿನಿಂದ ಮತ್ತೆ ಐದು ಡೆಸ್ಕುಗಳು ಕೊಡುಗೆ ಪಡೆಯಲಾಯಿತು.
- 2011–12ರಲ್ಲಿ ದಾನಿಗಳ ನೆರವಿನಿಂದ ಟಿ.ವಿ, ವಿಸಿಡಿ, ಮಿಕ್ಸರ್, ಯುಪಿಎಸ್ ಹಾಗೂ ವಾಚನಾ ಮೂಲೆಗಾಗಿ ಐದು ಸ್ಟೀಲ್ ರ್‍ಯಾಕ್‌ಗಳು.
- ದಾನಿಗಳ ನೆರವಿನಿಂದ ಕುಡಿಯುವ ನೀರಿನ ಸ್ಟೀಲ್ ಡ್ರಮ್ ಮತ್ತು ಶುದ್ಧತೆಗಾಗಿ ಅಕ್ವಗಾರ್ಡ್ ಕೊಡುಗೆ.
- ಹಳೆ ವಿದ್ಯಾರ್ಥಿಗಳಿಂದ ಎರಡು ಕಂಪ್ಯೂಟರ್ ಮತ್ತು ಒಂದು ಕಂಪ್ಯೂಟರ್ ಟೇಬಲ್,
- ಶಾಲಾ ಅಭಿವೃದ್ಧಿ ಸಮಿತಿಯಿಂದ (ಲಾಂಗ್) ದೊಡ್ಡದಾದ ಟೇಬಲ್,
- ಗ್ರಂಥಾಲಯ ನಿರ್ಮಾಣಕ್ಕಾಗಿ ದಾನಿಗಳಿಂದ ಐವತ್ತು ಸಾವಿರ(50,000) ರೂಗಳ ದೇಣಿಗೆ ಮತ್ತು ದಾನಿಗಳಿಂದ ಗ್ರಂಥಾಲಯಕ್ಕೆ ಪುಸ್ತಕಗಳು ಕೊಡುಗೆ.
- ಅಡಿಗೆ ಮನೆ ಮತ್ತು ಉಗ್ರಾಣ ನಿರ್ಮಾಣ.
- ನಮ್ಮ ಶಾಲೆ ಇನ್ಸ್ಪೈರ್ ಅವಾರ್ಡ್‌ಗಾಗಿ ಎರಡು ಬಾರಿ ರಾಜ್ಯಮಟ್ಟಕ್ಕೆ ಆಯ್ಕೆ. (ಬೆಳಗಾವಿ ಮತ್ತು ಕುಮಟದಲ್ಲಿ)
- ಕನ್ನಡ ರಕ್ಷಣಾ ವೇದಿಕೆಯಿಂದ ಮಕ್ಕಳಿಗೆ 60 ತಟ್ಟೆ ಮತ್ತು ಲೋಟ,
- ಎಸ್.ಬಿ.ಐ ಬ್ಯಾಂಕ್‌ವತಿಯಿಂದ ಶಾಲಾ ಕೊಠಡಿಗಳಿಗೆ ಮಕ್ಕಳಿಗಾಗಿ ಐದು ಫ್ಯಾನ್, ಶುದ್ಧ ಕುಡಿಯುವ ನೀರಿಗಾಗಿ ಅಕ್ವಗಾರ್ಡ್ ಕೊಡುಗೆ.
- ಮಾಜಿ ಸೈನಿಕರ ನೆರವಿಂದ ಜ್ಞಾನ ಪೀಠ ಪ್ರಶಸ್ತಿ ಮತ್ತು ರಾಷ್ಟ್ರೀಯ ನಾಯಕರ ಭಾವ ಚಿತ್ರಗಳ ಕೊಡುಗೆ.
- ಜಿಲ್ಲಾ ಪಂಚಾಯ್ತಿಂದ ಶುದ್ಧ ಕುಡಿಯುವ ನೀರಿಗಾಗಿ ಅಡುಗೆ ಮನೆಗೆ ಅಕ್ವಗಾರ್ಡ್ ಕೊಡುಗೆ.
- 2012–13ನೇ ಸಾಲಿನಲ್ಲಿ "ಶಾಲಾ ಕೈಪಿಡಿ" ಕೊಡುಗೆ. ಮತ್ತು ದಾನಿಗಳಿಂದ ಶಿಕ್ಷಕರಿಂದ ಬಿಳಿ ಸಮವಸ್ತ್ರ ಮತ್ತು ಇಂಗ್ಲೀಷ್ ಡಿಕ್ಷನರಿ ಕೊಡುಗೆ.
- 2015–16ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯ್ತಿಂದ ಮಕ್ಕಳಿಗಾಗಿ ಊಟದ ಹಾಲ್ ನಿರ್ಮಾಣ.
- 2016–17ನೇ ಸಾಲಿನಲ್ಲಿ ಮಕ್ಕಳಿಗಾಗಿ ದಾನಿಗಳಿಂದ ಟೈ ಮತ್ತು ಬೆಲ್ಟ್ ವಿತರಣೆ.

- ರೋಟರಿ ಕ್ಲಬ್‌ವತಿಯಿಂದ ಮಕ್ಕಳಿಗಾಗಿ ವಾಷ್ ಬೇಸನ್ ಮತ್ತು ಪುಸ್ತಕ ಮತ್ತು ಲೇಖನ ಸಾಮಗ್ರಿಗಳ ವಿತರಣೆ.
- 2016–17ನೇ ಸಾಲಿನಲ್ಲಿ ದಾನಿಗಳಿಂದ ನೆರವಿನಿಂದ ಅಕ್ಷರ ದಾಸೋಹ ದಾಸ್ತಾನು ಸಂಗ್ರಹಣೆಗಾಗಿ ದೊಡ್ಡದಾದ ಬಾಕ್ಸ್‌ಗಳು ಮತ್ತು ಪ್ರತಿಯೊಬ್ಬ ಶಿಕ್ಷಕರಿಗೆ ದಾಖಲೆಗಳನ್ನು ಸುರಕ್ಷಿತವಾಗಿ ಇಡಲು ಪೆಟ್ಟಿಗೆಗಳು.
- 2017–18ನೇ ಸಾಲಿನಲ್ಲಿ ದಾಖಲಾತಿ ಹೆಚ್ಚಿಸಲು ಒಂದನೇ ತರಗತಿಗೆ ದಾಖಲಾಗುವ ವಿದ್ಯಾರ್ಥಿಗಳಿಗೆ ಒಂದು ಸಾವಿರ (1000) ರೂಗಳ ಬಾಂಡ್ ವಿತರಣೆ. ಒಟ್ಟು ವಿದ್ಯಾರ್ಥಿಗಳು ಏಳು 1–3ನೇ ತರಗತಿಯಲ್ಲಿ ಜಾಣ ವಿಧ್ಯಾರ್ಥಿಗಳ ಹೆಸರಿನಲ್ಲಿ ಐದು ಸಾವಿರ (5000) ರೂಗಳ ಬಾಂಡ್.
- ಶಾಲಾ ಅಂದ ಹೆಚ್ಚಿಸಲು ದಾನಿಗಳ ನೆರವಿನಿಂದ ಶಾಲೆಗೆ ಸುಣ್ಣ–ಬಣ್ಣಕ್ಕೆ ಮತ್ತು ಗೋಡೆ ಬರಹಕ್ಕೆ ಹತ್ತು ಸಾವಿರ (10,000) ರೂಗಳು ಕೊಡುಗೆ.
- ಒಂದರಿಂದ ಮೂರನೇ ತರಗತಿ ಮಕ್ಕಳಿಗೆ ಪುಟ್ಟದಾದ ಡೆಸ್ಕ್ ಮತ್ತು ಕುಳಿತುಕೊಳ್ಳಲು ಮ್ಯಾಟ್ ಸೌಲಭ್ಯ.
- ಪರಿಸರ ಮಿತ್ರ ಶಾಲೆಗಾಗಿ ದಾನಿಗಳ ನೆರವಿನಿಂದ ಪುಟ್ಟದಾದ ಸುಸಜ್ಜಿತ ಉದ್ಯಾನವನ ನಿರ್ಮಾಣ.
- ಶ್ರೀಮತಿ ಪಂಕಜ ಉಪನ್ಯಾಸಕರು ಶಾಲೆಯ ಹಳೇಯ ವಿದ್ಯಾರ್ಥಿ ಇವರಿಂದ ಶಾಲೆಯಲ್ಲಿ ಎರಡು ಮತ್ತು ಮೂರನೇ ತರಗತಿಯಲ್ಲಿ ಓದುತ್ತಿರುವ ಪ್ರತಿಭಾವಂತ ಮಕ್ಕಳಿಗೆ ಹತ್ತು ಸಾವಿರ ದೇಣಿಗೆ.
- ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟನೆ ಮಾಡಿದಾಗ ಹಳೇ ವಿದ್ಯಾರ್ಥಿಗಳಿಂದ ರೂ ಮೂರು (3000) ಸಾವಿರ ದೇಣಿಗೆ ಸಂಗ್ರಹ.

ಎಸ್.ಎಲ್.ಡಿ.ಪಿ ತರಬೇತಿ ಬಹಳ ಅತ್ಯುತ್ತಮವಾದ ತರಬೇತಿ ಈ ತರಬೇತಿ ನೀಡಿದವರಿಗೆಲ್ಲರಿಗೂ ಧನ್ಯವಾದಗಳು. ಈ ತರಬೇತಿಯಿಂದ ನಮ್ಮ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಕ್ಕಿತು. ನಮ್ಮ ಶಾಲೆಯಲ್ಲಿ ಈಗ ಎಲ್ಲಾ ರೀತಿಯ ಸೌಲಭ್ಯಗಳು ಇವೆ. ಕಂಪ್ಯೂಟರ್ ಶಿಕ್ಷಕರನ್ನು ಕೂಡ ನೇಮಿಸಿದ್ದೇವೆ.

ಗ್ರಂಥಾಲಯದ ಪುಸ್ತಕಗಳು, ಬೀರುಗಳಲ್ಲಿ ಸಂರಕ್ಷಿತವಾಗಿದ್ದು ಅವುಗಳ ಬಳಕೆ ಆಗದಿರುವುದು ಕಂಡು ಗ್ರಂಥಾಲಯವನ್ನು ಆಯ್ಕೆ ಮಾಡಿಕೊಂಡು ದಾನಿಗಳ ಸಹಾಯದಿಂದ ಐವತ್ತು ಸಾವಿರ (50,000) ರೂಗಳನ್ನು ಖರ್ಚು ಮಾಡಿ ಶಾಲೆಯಲ್ಲಿ ಗ್ರಂಥಾಲಯ ನಿರ್ಮಿಸಿ ಅದರ ಬಳಕೆ ಮಾಡಲಾಗುತ್ತಿದೆ. ಹೀಗೆ ಶಾಲೆಗೆ ಬೇಕಾಗುವ ಮೂಲಭೂತ ಸೌಕರ್ಯವನ್ನು ಮತ್ತು ಭೌತಿಕ ಅವಶ್ಯಕತೆಗಳನ್ನು ಒಂದೊಂದಾಗಿ ದಾನಿಗಳ ನೆರವಿನಿಂದ ಪಡೆದು ಶಾಲೆಯ ಗುಣಮಟ್ಟವನ್ನು ಹೆಚ್ಚಿಸಲಾಯಿತು.












ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಸರ್ವಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ
Dr. Sarvepalli Radhakrishnan
ಶಾಲಾ-ಕೈಪಿಡಿ
2012-13




ದಾನಿಗಳ ವಿವರ.
ದಾನಿಗಳ ಹೆಸರು
ದಾನ ನೀಡಿದ ವಸ್ತು ಮತ್ತು ರೂ
ಮೊತ್ತ
ವರ್ಷ
1 S.B.M. B.R.P. 100, ತಟ್ಟೆಗಳು 3,000 2004-05
2 ಪಾಲಾಕ್ಷಪ್ಪ 1000, F.D. 1,000 2000-01
3 ಗ್ರಾಮ ಪಂಚಾಯ್ತಿ 5, ಪ್ಲಾಸ್ಟಿಕ್ ಕುರ್ಚಿ 1,500 2005-06
4 S.B.C. ಕಮಿಟಿ ಮತ್ತು ರೋಟರಿ ಕ್ಲಬ್‌ನಿಂದ ಕಬ್ಬಿಣದ ಡೆಸ್ಕ್‌ಗಳು 25,000 (5500+19,500) 2005-06
5 ಡಾ|| ಪರಮೇಶ್ವರಪ್ಪ.C 3, ಪ್ಲಾಸ್ಟಿಕ್ ಕುರ್ಚಿ 750 2008-09
6 S.B.C. ಕಮಿಟಿ ಲಾಂಗ್ ಟೇಬಲ್ 4,000 2010-11
7 ಕರುಣಾಕರ್.L ಕಲರ್ T.V. 5,000 2011-12
8 ಶಾಲಾ ಸಿಬ್ಬಂದಿ ವರ್ಗ V.C.D. 1,500 2011-12
9 M.V. ಸಾವಿತ್ರಮ್ಮ ಮಿಕ್ಸರ್ 3,000 2011-12
10 S.B.I ಶಂಕರ ಘಟ್ಟ ಡೆಸ್ಕ್‌ಗಳು-3 10,000 2011-12
11 ಗೋಪಾಲ್ ಕೃಷ್ಣ ಡೆಸ್ಕ್-1 3,500 2011-12
12 ದೇವಪ್ಪ ಡೆಸ್ಕ್-1 3,500 2011-12
13 ಶ್ರೀಕಾಂತ್ ಸ್ಟೀಲ್ ಡ್ರಮ್ 1,500 2011-12
14 ಸುಧಾಕರ್.L ಶೋಧಕ ಯಂತ್ರ 15,500 2011-12
15 K.T. ಕುಟುಂಬದವರಿಂದ ರಾಕ್-1 2,000 2011-12
16 ಕೇಶವ.ಬಸವರಾಜ್ ರ್‍ಯಾಕ್-1 2,000 2011-12
17 ಶಾಂತಮ್ಮ ಕುಟುಂಬದವರಿಂದ U.P.S. 2,000 2011-12

